■ ಹನಿ

## ಹೊಸ ಸೇನಾ ಮುಖ್ಯಸ್ಥ

'ಜಗತ್ತಿನಲ್ಲೇ ಎರಡನೇ ಅತಿ ದೊಡ್ಡ ಸೈನ್ಯ'ವಾದ ಭಾರತೀಯ ಭೂಸೇನೆಯ 25ನೇ ಮುಖ್ಯಸ್ಥರಾಗಿ ಜನರಲ್ ಬಿಕ್ರಮ್ ಸಿಂಗ್ ನೇಮಕಗೊಂಡಿದ್ದಾರೆ. 13 ಲಕ್ಷ ಸೈನಿಕರನ್ನು ನಿರ್ದೇಶಿಸುವ ಈ ಹೊಸ ಕೆಲಸ ಜ.ಬಿಕ್ರಮ್ ಸಿಂಗ್ ಅವರಿಗೆ ದೊರಕುವುದು ಮೂರು ತಿಂಗಳ ಹಿಂದೆಯೇ ಖಚಿತವಾಗಿತ್ತು. ಆದರೆ ಆಗ ಮುಖ್ಯಸ್ಥರಾಗಿದ್ದ ಜನರಲ್ ವಿ.ಕೆ.ಸಿಂಗ್ ಜನನ ದಿನಾಂಕದ ವಿವಾದದ ಹಿನ್ನೆಲೆಯಲ್ಲಿ ಹೊಸ ನೇಮಕದ ಬಗ್ಗೆ ಆತಂಕವೂ ಮನೆಮಾಡಿತ್ತು.

ಸಿಖ್ ಲೈಟ್ ಇನ್‌ಫೆಂಟ್ರಿಗೆ ಬಿಕ್ರಮ್ ಸಿಂಗ್ ಸೇರ್ಪಡೆಯಾದದ್ದು 1972ರಲ್ಲಿ. 59ರ ಹರೆಯದ ಈ ಸರ್ದಾರ್ಜಿಗೆ 40 ವರ್ಷಗಳ ಸುದೀರ್ಘ ಅನುಭವವಿದೆ. ಸ್ನೇಹಿತರ ಪ್ರೀತಿಯ 'ಬಿಕ್ಕಿ', ಯುವಕರಾಗಿದ್ದಾಗಲೇ ತರಬೇತಿ ಶಾಲೆಯಲ್ಲಿ 'ಬೆಸ್ಟ್ ಯಂಗ್ ಆಫೀಸರ್' ಪ್ರಶಸ್ತಿ ಪಡೆದವರು. ಕಾರ್ಯಾಚರಣೆಯ ಹಿನ್ನೆಲೆಯಲ್ಲಿ 'ಕಮ್ಯಾಂಡೋ ಡ್ಯಾಗರ್' ಪುರಸ್ಕಾರ ಗಳಿಸಿದ್ದೂ ಇವರ ಸಾಧನೆ. ಇನ್‌ಫೆಂಟ್ರಿ ಸ್ಕೂಲ್‌ನಲ್ಲಿ ಇನ್‌ಸ್ಟ್ರಕ್ಟರ್ ಆಗಿದ್ದಾಗ, ಮದುವೆಯೊಂದರಲ್ಲಿ ನೋಡಿದ ಸುರ್ಜಿತ್ ಕೌರ್‌ಳಲ್ಲಿ ಮೊದಲ ನೋಟದಲ್ಲೇ ಅನುರಕ್ತರಾದ ಬಿಕ್ರಮ್ ಸಿಂಗ್, ಮುಂದಿನ ವಾರವೇ ಮದುವೆ ಪ್ರಸ್ತಾಪ ಮುಂದಿಟ್ಟರು! ಮನೆಯವರು ಮಾತನಾಡಿ 'ಆರು ತಿಂಗಳಲ್ಲಿ ಮದುವೆ' ಎಂದಾಗ 'ಈ ತಿಂಗಳೇ ನಡೆದಿದ್ದರೆ ಚೆನ್ನಾಗಿತ್ತು' ಎಂದು ಭಾವೀ ಪತ್ನಿಗೆ ಅಲವತ್ತುಕೊಂಡರಂತೆ.



ಬಿಕ್ರಮ್ ಸಿಂಗ್ ಚಿಕ್ಕಂದಿನಲ್ಲಿ ಆಸಕ್ತಿ ಹೊಂದಿದ್ದು ಜುಆಲಜಿ ಮತ್ತು ಬಯಾಲಜಿ ವಿಷಯಗಳಲ್ಲಿ. ಆದರೆ 1962 ಮತ್ತು 65ರ ಯುದ್ಧಗಳ ಸುದ್ದಿ ಓದಿ ಸೇನೆಯನ್ನು ಸೇರಲು ಪ್ರೇರಣೆ ಪಡೆದರು. ಅಪೂರ್ವ ಜ್ಞಾಪಕ ಶಕ್ತಿಗೆ ಹೆಸರಾಗಿರುವ ಬಿಕ್ರಮ್ ಸಿಂಗ್, ಈಗ ಇಬ್ಬರು ಮಕ್ಕಳ ಸಂತೃಪ್ತ ಕುಟುಂಬ ಹೊಂದಿದವರು.

ಯುದ್ಧಭೂಮಿಗಿಂತ ಹೆಚ್ಚಾಗಿ ಕೇಂದ್ರ ಕಚೇರಿಯಲ್ಲೇ ಕಾಲ ಕಳೆದವರೆಂಬ ಕೊಂಕು ಮಾತು ಬಿಕ್ರಮ್ ಸಿಂಗ್ ಬಗ್ಗೆ ಕೇಳಿ ಬಂದಿರುವುದು ಸುಳ್ಳಲ್ಲ. ಆದರೆ ಕೇಂದ್ರ ಕಚೇರಿಯಲ್ಲಿ ಕುಳಿತೂ ಯುದ್ಧಭೂಮಿಯ ರಣತಂತ್ರಗಳನ್ನು ರೂಪಿಸುವಲ್ಲಿ ತೊಡಗಿದ್ದರು ಎನ್ನುವುದು ಅವರ ಬೆಂಬಲಿಗರ ವಾದ. ಹಾಗೆಂದು ಮುಖ್ಯಸ್ಥರ ಹುದ್ದೆಗೆ ಯಾವುದೇ ವಿವಾದವಿಲ್ಲದೆ ಸುಲಭವಾಗಿ ಈ ನೇಮಕ ನಡೆಯಲಿಲ್ಲ. ದಕ್ಷಿಣ ಕಾಶ್ಮೀರದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ನಕಲಿ ಎನ್‌ಕೌಂಟರ್ ಮಾಡಿ ಕೂಲಿ ಕಾರ್ಮಿಕನೊಬ್ಬನನ್ನು ಹಿಜ್ಬುಲ್ ಮುಜಾಹಿದೀನ್ ಉಗ್ರನೆಂದು ಕೊಂದು ಹಾಕುವುದಕ್ಕೆ ಕಾರಣಕರ್ತರು ಎಂಬ ಆರೋಪವೂ ಇವರ ಮೇಲಿದೆ. ಈ ಕುರಿತು ಮೃತನ ತಾಯಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಇನ್ನೂ ಕಾಶ್ಮೀರ ಹೈಕೋರ್ಟಿನಲ್ಲಿ ನಡೆಯುತ್ತಿದೆ. ಉಗ್ರರ ಜತೆ ಆ ಎನ್‌ಕೌಂಟರ್ ನಡೆದಾಗ ಗಾಯಗೊಂಡಿದ್ದ ಬಿಕ್ರಮ್‌ಸಿಂಗ್ ಅವರನ್ನು ವಿಮಾನದಲ್ಲಿ ಚಿಕಿತ್ಸೆಗೆ ದೆಹಲಿಗೆ ಕರೆತರಲಾಗಿತ್ತು.

'ಬಿಕ್ರಮ್‌ಸಿಂಗ್‌ರ ಹಿರಿಯ ಸೊಸೆ ಪಾಕಿಸ್ತಾನಿ ಪ್ರಜೆ. ಹಾಗಾಗಿ ಇವರ ಆಯ್ಕೆ ಸರಿಯಲ್ಲ' ಎಂದೂ ಸುದ್ದಿಯಾಯಿತು. ತನಿಖೆ ನಡೆಸಿದಾಗ, ಆಕೆ ಅಫ್ಘಾನ್ ತಂದೆ ಮತ್ತು ಮಧ್ಯ ಏಷ್ಯಾದ ತಾಯಿಗೆ ಜನಿಸಿದವಳು; ಮಾತ್ರವಲ್ಲ ಅಮೆರಿಕನ್ ಪ್ರಜೆ ಎನ್ನುವುದೂ ಗೊತ್ತಾಯಿತು. ಈ ಕುರಿತು ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾ ಮಾಡಿತು.

'ಸೆಕ್ಯುಲರ್ ಹಾಗೂ ರಾಜಕೀಯರಹಿತರಾಗಿ ಕೆಲಸ ಮಾಡಿ. ಸೇನೆಯ ಕೆಲಸಕ್ಕೆ ಸಂಬಂಧಿಸಿ ನಾನು ಯಾವುದನ್ನೂ ಚಾಪೆ ಕೆಳಗೆ ಮುಚ್ಚಿಡುವುದಿಲ್ಲ' ಎಂದು ಅಧಿಕಾರ ಸ್ವೀಕರಿಸಿದ ಬಳಿಕ ಬಿಕ್ರಮ್‌ಸಿಂಗ್ ಹೇಳಿದ್ದಾರೆ. ಅವರು ನುಡಿದಂತೆ ನಡೆಯಬಹುದೆ?

## ಗಟ್ಟಿಗಿತ್ತಿ ಮಾರ್ಟಿನಾ



'ಜಗತ್ತಿನ ಅತ್ಯುತ್ತಮ ಸಾರ್ವಕಾಲಿಕ ಕ್ರೀಡಾಪಟು ಯಾರು?' ಎಂಬ ಪ್ರಶ್ನೆ ಕೇಳಿದರೆ, ಬಹುಶಃ 'ಮಾರ್ಟಿನಾ ನವ್ರಾಟಿಲೋವ' ಎಂಬ ಹೆಸರು ಹೇಳುವವರ ಸಂಖ್ಯೆ ಹೆಚ್ಚೇ ಇರುತ್ತದೆ. ಟೆನಿಸ್ ಜಗತ್ತಿನಲ್ಲಿ ಹತ್ತಾರು ದಾಖಲೆಗಳನ್ನು ಮಾಡಿರುವ 56ರ ಹರೆಯದ ಮಾರ್ಟಿನಾ (ಬರ್ತ್‌ಡೇ 18-10-1956) ಈಗ ನಿವೃತ್ತಿಯ ದಿನಗಳಲ್ಲಿ 'ಆರೋಗ್ಯ ಮತ್ತು ಫಿಟ್‌ನೆಸ್' ಕುರಿತ ಪ್ರಚಾರಾಂದೋಲನದಲ್ಲಿ ತಲ್ಲೀನರಾಗಿದ್ದಾರೆ. ಹೆಚ್ಚು ವರ್ಷಗಳ ಕಾಲ ಬದುಕುವುದು ಮತ್ತು ಆರೋಗ್ಯ ಉಳಿಸಿಕೊಳ್ಳುವುದು ಹೇಗೆ ಎಂಬ ಬಗ್ಗೆ ಅವರೀಗ ಎಲ್ಲೆಡೆ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ನಡೆಸುತ್ತಿದ್ದಾರೆ. 'ಶೇಪ್ ಯುವರ್‌ಸೆಲ್ಫ್' ಎನ್ನುವ ಅವರ ಪುಸ್ತಕ ಈ ನಿಟ್ಟಿನಲ್ಲಿ ಹಿರಿಯರು ಮತ್ತು ಕಿರಿಯರಿಗೆ ಏಕಕಾಲದಲ್ಲಿ ಮಾರ್ಗದರ್ಶಿ. 40 ವರ್ಷಗಳ ಕಾಲ ಕ್ರೀಡಾಪಟುವಾಗಿದ್ದು 9 ವಿಂಬಲ್ಡನ್ ಪ್ರಶಸ್ತಿಗಳನ್ನೂ, 59 ಗ್ರ್ಯಾನ್‌ಸ್ಲಾಮ್‌ಗಳನ್ನೂ ಗೆದ್ದುಕೊಂಡ ಮಾರ್ಟಿನಾ ತಮ್ಮ ಅನುಭವವನ್ನೇ ಧಾರೆ ಎರೆಯುತ್ತಿದ್ದಾರೆ. ಜುಲೈ 1ರಿಂದ ಆರಂಭವಾಗಲಿರುವ 'ಲಿವಿಂಗ್ ಅಟ್ ಯುವರ್ ಪೀಕ್' ಶಿಬಿರಕ್ಕೆ ಮಾರ್ಟಿನಾ ಉಪನ್ಯಾಸಕಿಯಾಗಿ ಬರುತ್ತಾರೆಂದ ಸುದ್ದಿ ಪ್ರಕಟವಾದ ಬಳಿಕ ಸಾವಿರ ಡಾಲರ್ ಫೀಸು ಕೊಟ್ಟು ಅದಕ್ಕೆ ಸೇರುವವರ ನೂಕು ನುಗ್ಗಲೂ ಹೆಚ್ಚಾಗಿದೆ.

ಎಳೆಯ ಪ್ರಾಯದಲ್ಲೇ ಅಪ್ಪ-ಅಮ್ಮನ ಡೈವೋರ್ಸ್ ನೋಡಿ ಬೆಳೆದ ಮಾರ್ಟಿನಾ, 15ರ ಹರೆಯದಲ್ಲಿ ಜೆಕ್ ರಾಷ್ಟ್ರೀಯ ಚಾಂಪಿಯನ್‌ಶಿಪ್ ಗೆದ್ದವರು. 1981ರಲ್ಲಿ ಅಮೆರಿಕ ಪ್ರಜೆಯಾಗಿ, ಡಲ್ಲಾಸ್‌ಗೆ ವಲಸೆ ಹೋದವರು. 30ಕ್ಕೆಲ್ಲಾ ನಿವೃತ್ತಿ ಬೇಡುವ ಟೆನಿಸ್‌ನಲ್ಲಿ 37ರ ಹರೆಯದಲ್ಲಿ ವಿಂಬಲ್ಡನ್ ಫೈನಲ್ ಪ್ರವೇಶಿಸಿ ದಾಖಲೆ ಬರೆದಾಕೆ. ಈವರೆಗೆ 167 ಸಿಂಗಲ್ಸ್ ಟೈಟಲ್‌ಗಳನ್ನು ಗೆದ್ದಿರುವ ಈಕೆಯ ದಾಖಲೆಯನ್ನು ಮಹಿಳೆಯರು ಬಿಡಿ, ಯಾವ ಪುರುಷರೂ ಈವರೆಗೆ ಸರಿಗಟ್ಟಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಸ್ತನ ಕ್ಯಾನ್ಸರ್ ವಿರುದ್ಧ ಹೋರಾಡಿ ಗೆದ್ದ ಕೀರ್ತಿ ಈಕೆಯದ್ದು. 2 ತಿಂಗಳ ಹಿಂದೆ ಟೀವಿಯಲ್ಲಿ 'ಡ್ಯಾನ್ಸಿಂಗ್ ವಿದ್ ದ ಸ್ಟಾರ್ಸ್' ರಿಯಾಲಿಟಿ ಶೋನಲ್ಲಿ ಭಾಗವಹಿಸಿದ್ದು (ಮೊದಲ ಸುತ್ತಿನಲ್ಲೇ ಸೋತದ್ದು ಬೇರೆ ವಿಷಯ) ಈಕೆಯ ಜೀವನೋತ್ಸಾಹಕ್ಕೆ ಸ್ಪಷ್ಟಸಾಕ್ಷಿ. 'ದೀರ್ಘ ಆಯುಷ್ಯ ಮತ್ತು ಗಟ್ಟಿ ಆರೋಗ್ಯ ಇರಬೇಕೆಂದರೆ ಯಾರೇ ಆದರೂ ದೊಡ್ಡ ಅಥ್ಲೀಟ್ ಆಗಿರಲೇಬೇಕೆಂದಿಲ್ಲ' ಎನ್ನುವುದು ಈಕೆಯ ದಿಟ್ಟನುಡಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65